**ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಕೆ. ಆರ್. ಪುರಂ**

**O.S. No 2000/2025**
**DW-2**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 16.07.2026**

**ಪಾಟೀ ಸವಾಲು : ವಾದಿ ಪರ ವಕೀಲರಾದ: ಶ್ರೀಮತಿ ವಿ.ಎಂ ರವರಿಂದ**

**1. ನಾನು ಸಾಕ್ಷಿ ಪ್ರಮಾಣ ಪತ್ರದಲ್ಲಿ ನಾನು ಅಮರೇಶ್‌ಗೌಡ ರವರ ತಮ್ಮನಾದ ರಮೇಶ್ ಗೌಡನ ಜಾಗದಲ್ಲಿ ಬಾಡಿಗೆಯಿಂದ ಇರುವುದರಿಂದ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ . ಸದರಿ ಜಾಗದ ಸರ್ವೆ ನಂಬರ್ 3 ಎ/1/1/01 ಎಂದು ಇರುತ್ತದೆ. ನಾನು ಸದರಿ ಜಾಗದಲ್ಲಿ ಸನ್ 2018 ನೇ ಸಾಲಿನಿಂದ ಬಾಡಿಗೆಗೆ ಇರುತ್ತೇನೆ. ಕಳೆದ ಮೂರು ವರ್ಷದ ಹಿಂದೆ ವಾದಿಯರು ದಾವಾ ಸ್ವತ್ತಿನ ಮೇಲೆ ದಾವೆಯನ್ನು ಸಲ್ಲಿಸಿರುತ್ತಾರೆ. ನಾನು ದಾವಾ ಸ್ವತ್ತಿನಲ್ಲಿ ಬಾಡಿಗೆಯಿಂದ ಸ್ಟಾರ್ ಅಂಬುಲೆನ್ಸ್ ಎಂಬ ಟ್ರಾವೇಲ್ಸ್ ಅನ್ನು ನಡೆಸುತ್ತೇನೆ. ನಾನು ಬಾಡಿಗೆಯನ್ನು ರಮೇಶ್ ಗೌಡರವರ ಮ್ಯಾನೇಜರ್ ಗೆ ನೀಡುತ್ತೇನೆ. ಸದರಿ ಬಾಡಿಗೆಯನ್ನು ಆನ್‌ಲೈನ್ ಮೂಲಕ ನೀಡುತ್ತೇನೆ.**

**2. ನಿಪಿ-33 ಬ್ಯಾಂಕ್ ಖಾತೆಯ ವಿವರ ಪಟ್ಟಿಯಲ್ಲಿ ಮೆಟ್ರೊ ಅಂಬುಲೆನ್ಸ್ ಸರ್ವೀಸ್ ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಾನು ದಾವಾ ಸ್ವತ್ತಿನಲ್ಲಿ ಬಾಡಿಗೆಯಿಂದ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಬ್ಯಾಂಕ್ ಖಾತೆಯಲ್ಲಿ ಪ್ರತಿ ತಿಂಗಳು ಬಾಡಿಗೆ ಹಣ ಸಂದಾಯ ಆದ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿ ವರ್ಷ ನಾನು ಬಾಡಿಗೆ ಪತ್ರವನ್ನು ನವೀಕರಿಸುತ್ತಾ ಬಂದಿದ್ದೇನೆ. ಸನ್ 2018 ರಿಂದ ಎಲ್ಲಾ ಬಾಡಿಗೆ ಕರಾರು ಪತ್ರವನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿ. ನಿಪಿ-30 ಮತ್ತು 31 ದಾಖಲಾತಿಗಳನ್ನು ನಾನು ಸೃಷ್ಟಿಮಾಡಿಕೊಂಡು ಪ್ರತಿವಾದಿಗೆ ಸಹಾಯವಾಗಲಿ ಎಂದು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸನ್ 2018 ನೇ ಸಾಲಿನಿಂದ ಇಲ್ಲಿಯವರೆಗಿನ ವಿದ್ಯುತ್ ಬಿಲ್‌ಗಳನ್ನು ನಾನು ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿಯು ಕಳೆದ ಎರಡು ವರ್ಷದ ವಿದ್ಯುತ್ ಬಿಲ್ಲಗಳನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಗೆ ಅನುಕೂಲವಾಗಲಿ ಎಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.**

O.S. No 2000/2025

DW-2

**3. ವಾದಿಯನ್ನು ನಾನು ನೋಡಿರುತ್ತೇನೆ, ಸಾಕ್ಷಿ ಮುಂದುವರೆದು ಮೂರು ವರ್ಷದ ಹಿಂದೆ ಒಂದು ಭಾರಿ ದಾವಾ ಸ್ವತ್ತಿಗೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ವಾದಿಗೆ ಸೇರಿರುವುದರಿಂದ ವಾದಿಯು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿಯೇ ಇರುತ್ತಾರೆ ಎಂದರೆ ಸರಿಯಲ್ಲ.**

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ**

**ದಿವಾಣಿ ಮತ್ತು ಪ್ರಥಮ ದರ್ಜೆನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ,**
**ಕೆ. ಆರ್. ಪುರಂ**